**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಜೇವರ್ಗಿ</u>**

**ಸಿಸಿ ನಂ.45/2025**

| | | |
|---|---|---|
| ಪಿರ್ಯಾರ್ದುದಾರಃ | 1. | ಕರ್ನಾಟಕ ಸರ್ಕಾರದ ಪರ ಜೇವರ್ಗಿ ಪೋಲಿಸರು |
| | | **ವಿರುದ್ಧ** |
| ಆರೋಪಿ | 2 | ಮಲ್ಲಿಕಾರ್ಜುನ ತಂದೆ ಅಯ್ಯಣ್ಣ ಅಳ್ಳೊಳ್ಳಿ<br>ವಯಸ್ಸುಃ 26 ವರ್ಷ , ಉದ್ಯೋಗಃ ಚಾಲಕ<br>ಸಾ.ಖಾಜಾ ಕಾಲೋನಿ ಜೇವರ್ಗಿ, ತಾಃ ಜೇವರ್ಗಿ,<br>ಜಿಃ ಕಲ್ಬುರ್ಗಿ |

**<u>ಆಪಾದನೆ</u>**

ಶ್ರೀಮತಿ ತಯ್ಯಬಾ ಸುಲ್ತಾನಾ, ಬಿ.ಎ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳಾದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆ,

ದಿನಾಂಕ 06-11-2024 ರಂದು ರಾತ್ರಿ 10-00 ಗಂಟೆ ಸಮಯದಲ್ಲಿ ಜೇವರ್ಗಿ ಪೋಲಿಸ ಠಾಣಾ ವ್ಯಾಪ್ತಿಯ ಜೇವರ್ಗಿ-ಶಹಾಪೂರ ರಸ್ತೆಯ ಚಿಗರಳ್ಳಿ ಕ್ರಾಸ್ ಹತ್ತಿರ ರಸ್ತೆಯ ಪಕ್ಕದಲ್ಲಿರುವ ಹತ್ತಿ ಮಿಲ್ ಎದುರಿನ ರಸ್ತೆಯ ಮೇಲೆ ಚಿಗರಳ್ಳಿ ಕ್ರಾಸ್ ಕಡೆಯಿಂದ ಜೇವರ್ಗಿ ಕಡೆಗೆ 2ನೇ ಆರೋಪಿಯಾದ ನೀವು ನಿಮ್ಮ ಆಟೊ ರಿಕ್ಷಾ ನಂ.ಕೆಎ-32 ಡಿ-2541 ರಲ್ಲಿ ಚಾಸಾ-1 ಮತ್ತು 6ರವರನ್ನು ಕೂರಿಸಿಕೊಂಡು ಹೋಗಿ ರಸ್ತೆಯ ಮೇಲೆ ನಿಂತಿದ್ದ ಟ್ರ್ಯಾಕ್ಟರ್ ನಂ.ಕೆಎ-32 ಟಿಎ-9626ರ ಹಿಂದಿನ ಭಾಗಕ್ಕೆ ಡಿಕ್ಕಿಪಡಿಸಿದ್ದರಿಂದ ಸದರಿ ನಿಮ್ಮ ಆಟೋ ರಿಕ್ಷಾ ಪಲ್ಟಿಯಾಗಿ ಬೀಳಿಸಿ ಸದರಿ ಆಟೋರಿಕ್ಷಾದಲ್ಲಿ ಪ್ರಯಾಣಿಸುತ್ತಿದ್ದ ಚಾಸಾ-1 ರವರಿಗೆ ಹಣೆಯ ಮೇಲೆ ಗದ್ದಕ್ಕೆ ಎಡಗಲ್ಲದ ಮೇಲೆ ಮೂಗಿನ ಹತ್ತಿರ ಬಲಕೈ ಮಣಿಕಟ್ಟಿನ ಹತ್ತಿರ ರಕ್ತಗಾಯ ಹಾಗೂ ಚಾಸಾ-6ರವರಿಗೆ ಎಡಗೈ ಮುಂಗೈ ಹತ್ತಿರ ಮುರಿದ ಗಾಯ ಎಡಭಾಗದ ಪಕ್ಕೆಲುಬಿನ ಹತ್ತಿರ ಗುಪ್ತಗಾಯ ಆಗುವಂತೆ ಮಾಡಿದ ಕಾರಣ ಭಾರತಿಯ ನ್ಯಾಯ ಸಂಹಿತಾ ಕಲಂ 281, 125(ಎ), 125(ಬಿ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುವಿರೆಂದು ನಿಮ್ಮ ಮೇಲೆ ಆರೋಪಿಸಲಾಗಿದೆ?

ಸದರಿ ಆಪಾದನೆಗಳ ಬಗ್ಗೆ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ಸದರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಿಃ 28-07-2025 ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಈ ಮೇಲ್ಕಂಡ ಆರೋಪಗಳ ಬಗ್ಗೆ ವಿಚಾರಣೆಗೆ ಈ ಕೆಳಕಂಡಂತೆ ಆದೇಶಿಸುತ್ತೇನೆ.**

ಪ್ರಶ್ನೆ-1ಃ ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?

2ನೇ ಆರೋಪಿ ಉತ್ತರಃ

ಪ್ರಶ್ನೆ-2ಃ ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ
ವಿಚಾರಣೆಯಾಗಬೇಕೋ?

2ನೇ ಆರೋಪಿ ಉತ್ತರಃ

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

(ಶ್ರೀಮತಿ ತಯ್ಯಬಾ ಸುಲ್ತಾನಾ)
ಹಿರಿಯ ಸಿವಿಲ್ ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು,
ಜೇವರ್ಗಿ

ದಿನಾಂಕಃ 28-07-2025